ತರೀಕೆರೆಯಲ್ಲಿದೆ. ಒಂದು ವರ್ಷದಿಂದ ನಿವೇಶನವಿಲ್ಲವೆಂದು ಹೇಳುತ್ತಿದ್ದರು. ನಾವು ಈಗ ದಾನದ ರೂಪದಲ್ಲಿ ನಿವೇಶನಗಳನ್ನು ಕೊಡಿಸಿದ್ದೇವೆ. ತರೀಕೆರೆ, ಅಜ್ಜಂಪುರ, ಆಮ್ಜೇಹಳ್ಳಿ, ಶಿವನಿ ಈ ಕಡೆಗಳಲ್ಲಿ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭ ಮಾಡುವುದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಯಾವಾಗ ಕೊಡುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಈ ಹಿಂದೆ ಆ ವಿದ್ಯಾರ್ಥಿ ನಿಲಯಗಳು ನಡೆಯುತ್ತಿದ್ದರೆ, ಅದಕ್ಕೆ ಕಟ್ಟಡವನ್ನು ಕಟ್ಟುವುದರ ಬಗ್ಗೆ ನಕ್ಷೆ, ಅಂದಾಜು ಸರ್ಕಾರಕ್ಕೆ ಬಂದಿದ್ದರೆ ಅಗತ್ಯವಾಗಿ ಅದಕ್ಕೆ ಮಂಜೂರಾತಿಯನ್ನು ಕೊಡುತ್ತೇನೆ.

ಬೀದರ್ ಜಿಲ್ಲೆಯಲ್ಲಿ ಒಳಚರಂಡಿ ಹಾಗೂ ಕುಡಿಯುವ ನೀರಿನ ಯೋಜನೆಗಳು

197 (2232) : **ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) :** ಮಾನ್ಯ ನಗರಾಬಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ಬೀದರ್ ಜಿಲ್ಲೆಯಲ್ಲಿ ಎಷ್ಟು ಯೋಜನೆಗಳು ಕಾರ್ಯಗತವಾಗುವ ಅಂಚಿನಲ್ಲಿದೆ ಮತ್ತು ಈ ವರ್ಷ ಎಷ್ಟು ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು; (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು).

(ಆ) ಭಾಲ್ಕಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ತೊಂದರೆ ಇದ್ದು ಮಂಡಲಿಯು ಇಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ಹೊಸದಾಗಿ ತೆಗೆದುಕೊಳ್ಳಲಿದೆಯೇ;

(ಇ) ಇಲ್ಲದಿದ್ದಲ್ಲಿ ಕಾರಣಗಳೇನು;

(ಈ) ಜಿಲ್ಲೆಯಲ್ಲಿ ಮಂಡಲಿಯು ನೀರಿನ ಯೋಜನೆಗಳಿಗಾಗಿ ವೆಚ್ಚ ಮಾಡುತ್ತಿರುವ ಹಣವೆಷ್ಟು (ಕಳೆದ 5 ವರ್ಷಗಳ ವಿವರಗಳನ್ನು ಒದಗಿಸುವುದು)

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

(ಅ) ಬೀದರ್ ಜಿಲ್ಲೆಯಲ್ಲಿ ನಾಲ್ಕು ನಗರ ಪ್ರದೇಶಗಳಲ್ಲಿ ನೀರು ಸರಬರಾಜು ಯೋಜನೆಗಳು ಕ.ನೀ.ಸ.ಮ.ಒ.ಮ. ಯಿಂದ ಕಾರ್ಯಗತಗೊಳಿಸಲಾಗಿದೆ.

1. ಬೀದರ್ ನಗರ
2. ಬಸವ ಕಲ್ಯಾಣ ಪಟ್ಟಣ
3. ಹುಮ್ನಾಬಾದ್ ಪಟ್ಟಣ ಮತ್ತು
4. ಚಿಟಗುಪ್ಪ

ಭಾಲ್ಕಿ ಮತ್ತು ಔರಾದ್ ಪಟ್ಟಣಗಳಿಗೆ ನೀರು ಸರಬರಾಜು ಯೋಜನೆಗಳನ್ನು ತಯಾರಿಸಲಾಗುತ್ತಿದೆ.

(ಅ) ಹೌದು

(ಆ) ಉದ್ಭವಿಸುವುದಿಲ್ಲ.

(ಈ)

	ಬೀದರ್	ಹುಮ್ನಾಬಾದ್	ಔರಾದ್	ಭಾಲ್ಕಿ	ಬಸವ ಕಲ್ಯಾಣ	ಚಿಟಗುಪ್ಪ
95-96:	80.03	0.42		10.39	0.17	0.67
96-97:	40.49	0.11		0.94	0.10	0.05
97-98:	40.78	0.03			0.03	0.06
98-99	228.51	2.07		0.94	6.20	
99-2000	168.15	238.24		2.90	58.74	32.99
	557.96	240.87		5.17	65.24	33.77

ಶ್ರೀ ಪ್ರಕಾಶ್ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಭಾಲ್ಕಿ ನೀರು ಸರಬರಾಜು ಯೋಜನೆಯನ್ನು ಯಾವ ರೀತಿಯಲ್ಲಿ ತಯಾರು ಮಾಡಲಾಗುತ್ತಿದೆ ಮತ್ತು ನೀರನ್ನು ಎಲ್ಲಿಂದ ತರಲಾಗುತ್ತದೆ ಎಂಬ ಬಗ್ಗೆ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯಲ್ಲಿ ನಗರ ನೀರು ಸರಬರಾಜು ಒಳಚರಂಡಿ ಮಂಡಲಿಯ ವತಿಯಿಂದ ಈಗಾಗಲೆ ಬೀದರ್ ನಗರ, ಬಸವಕಲ್ಯಾಣ, ಹುಮ್ನಾಬಾದ್, ಚಿಟಗುಪ್ಪ ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೊಳಿಸಿದ್ದೇವೆ. ಆದರೆ ಭಾಲ್ಕಿ ಮತ್ತು ಔರಾದ್ ಪಟ್ಟಣಗಳಿಗೆ ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ. ಭಾಲ್ಕಿ ಪಟ್ಟಣಕ್ಕೆ ನೀರನ್ನು ಒದಗಿಸುವ ಬಗ್ಗೆ ಈಗಾಗಲೆ ಯೋಜನೆಯನ್ನು ತಯಾರಿಸಿದ್ದೇವೆ. 4 ಕೋಟಿ 50 ಲಕ್ಷ ರೂಪಾಯಿಗಳ ಯೋಜನೆ ಆದಾಗಿದೆ. ಸುಮಾರು ಮೂವತ್ತು ಸಾವಿರ ಜನರಿಗೆ ಅನುಕೂಲ ಆಗಬೇಕೆಂದು ಸುಮಾರು ತಲಾ 90 ಲೀಟರ್ ನೀರನ್ನು ಕೊಡಬೇಕೆಂಬ ಯೋಜನೆಯನ್ನು ಸಿದ್ಧಪಡಿಸಿದ್ದೇವೆ. ಆದಷ್ಟು ಬೇಗನೆ ಇದನ್ನು ಕಾರ್ಯಗತ ಗೊಳಿಸುತ್ತೇವೆ. ಹುಡ್ಕೊ ಯೋಜನೆ ಮತ್ತು ಸರ್ಕಾರ ಈ ಎರಡರ ವತಿಯಿಂದಲೂ ಸಹ ಇದಕ್ಕೆ ಮಂಜೂರಾತಿ ಕೊಡಲು ಆಸಕ್ತಿ ವಹಿಸಲಾಗಿದೆ.

ಶ್ರೀ ಪ್ರಕಾಶ್ ಖಂಡ್ರೆ : ಮಾನ್ಯ ಅಧ್ಯಕ್ಷರೆ, ತಾವು ಭಾಲ್ಕಿ ಪಟ್ಟಣಕ್ಕೆ ನೀರನ್ನು ಒದಗಿಸಲು 4 ಕೋಟಿ 50 ಲಕ್ಷ ರೂಪಾಯಿಗಳ ಯೋಜನೆಯನ್ನೇನೊ ತೆಗೆದುಕೊಂಡಿದ್ದೀರಿ. ಆದರೆ ಆ ಯೋಜನೆಯನ್ನು 2000-2001ರ ಆರ್ಥಿಕ ವರ್ಷದಲ್ಲಿ ಮಾಡುತ್ತೀರಾ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಆ ಯೋಜನೆಯನ್ನು ಹುಡ್ಕೋ ಸಾಲದಿಂದ ಮಾಡುತ್ತೇವೆ. ಆ ರೀತಿ ಹುಡ್ಕೋದಿಂದ ಸಾಲವನ್ನು ಪಡೆಯುವಾಗ ರಾಜ್ಯ ಸರ್ಕಾರದಿಂದ ಸಹ ಅನುದಾನವನ್ನು

ಕೊಡುತ್ತೇವೆ. ಮುಂದಿನ ವರ್ಷ ಆ ರೀತಿ ಸರ್ಕಾರದಿಂದ ಅನುದಾನವನ್ನು ಕೊಡುವಂಥ ಕೆಲಸ ಮಾಡುತ್ತೇವೆ.

ಶ್ರೀ ಪ್ರಕಾಶ್ ಖಂಡ್ರೆ : ಈ ಯೋಜನೆಗೆ ನೀರನ್ನು ಎಲ್ಲಿಂದ ತೆಗೆದುಕೊಳ್ಳುತ್ತಿದ್ದೀರಿ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಕಾರಂಜಾ ಜಲಾಶಯದಿಂದ ನೀರನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ರಮೇಶ್‌ಕುಮಾರ್ ಪಾಂಡೆ : ಮಾನ್ಯ ಅಧ್ಯಕ್ಷರೆ, ನಮ್ಮ ಬೀದರ್ ಪಟ್ಟಣದ ನೀರು ಸರಬರಾಜು ಯೋಜನೆಯು ಮಂಜೂರಾಗಿ ಒಂಭತ್ತು ವರ್ಷಗಳಾಯಿತು. ಇದನ್ನು ಯಾವಾಗ ಮಾಡುತ್ತೀರಾ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಬೀದರ್ ಪಟ್ಟಣದ ಯೋಜನೆಯನ್ನು ಈ ವರ್ಷದಲ್ಲಿ ಮುಗಿಸುವ ಕಾರ್ಯಕ್ರಮವಿದೆ. ಈ ಯೋಜನೆ 1990ರಲ್ಲಿ ಪ್ರಾರಂಭವಾಗಿತ್ತು. ಇಲ್ಲಿನ ಕಾಮಗಾರಿ ಬಹಳ ಮಂದಗತಿಯಲ್ಲಿ ನಡೆದರೂ ಸಹ ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ನಮ್ಮ ಸರ್ಕಾರ ಇದನ್ನು ಮುಗಿಸುವ ಕೆಲಸ ಮಾಡುತ್ತದೆ.

ಬಾಗೇಪಲ್ಲಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ

200 (1906) : ಶ್ರೀ ಸಂಪಂಗಿ. ಎನ್. (ಬಾಗೇಪಲ್ಲಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬಾಗೇಪಲ್ಲಿ ಪಟ್ಟಣದಲ್ಲಿ ಕುಡಿಯುವ ನೀರಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಪಟ್ಟಣದಲ್ಲಿ ಇರುವ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರವಾಗಿ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯಿಂದ (ಕೆಯುಡಬ್ಲ್ಯುಎಸ್ ಮತ್ತು ಎಸ್‌ಬಿ) ಹೊಸದಾಗಿ ಕುಡಿಯುವ ನೀರಿನ ಯೋಜನೆಗಳನ್ನು ತೆಗೆದುಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಇ) ಹಾಗಿದ್ದಲ್ಲಿ ಹೊಸ ಯೋಜನೆಗಳನ್ನು ಪ್ರಸಕ್ತ ವರ್ಷದಲ್ಲಿ ತೆಗೆದುಕೊಳ್ಳಲು ಮಂಜೂರಾತಿಯನ್ನು ನೀಡಲಾಗುವುದೇ;

(ಈ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

(ಅ) ಬಂದಿದೆ

(ಆ) ಈ ಪಟ್ಟಣದಲ್ಲಿರುವ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರವಾಗಿ ಕನಸೀಸ ಮತ್ತು ಒ. ಚ. ಮಂಡಲಿಯಿಂದ ಕೊಳವೆ ಬಾವಿಗಳನ್ನು ಮೂಲವಾಗಿಟ್ಟುಕೊಂಡು ತಯಾರಿಸಿದ ಯೋಜನೆಗೆ ಕೇಂದ್ರ ಪುರಸ್ಕೃತ ತ್ವರಿತ ನೀರು ಸರಬರಾಜು ಕಾರ್ಯಕ್ರಮದಡಿ ಕೇಂದ್ರ ಸರ್ಕಾರದ